6. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು:– ಮಾನ್ಯ ಹೆಚ್.ಡಿ. ರೇವಣ್ಣನವರು ಪ್ರಶ್ನೆ ಕೇಳುವುದು.

ಅಧ್ಯಕ್ಷರು:– ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಕೊಟ್ಟಿರುವ ಉತ್ತರ ಸರಿಯಿಲ್ಲ. ಕಳೆದ ಮೂರು ವರ್ಷಗಳಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಜಾತಿ ಜನಾಂಗದವರಿಗೆ ನೀಡಲಾಗಿರುವ ಸಮುದಾಯ ಭವನ ಹಾಗೂ ಇತರೆ ಅಭಿವೃದ್ಧಿಗಾಗಿ ನೀಡಲಾಗಿರುವ ಅನುದಾನವೆಷ್ಟು ಎಂದು ಕೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಸಚಿವರು) (ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ನಿಗಮದ ವತಿಯಿಂದ ಯಾವುದೇ ಕಾರ್ಯಕ್ರಮವನ್ನು ರೂಪಿಸುವುದಿಲ್ಲ. ಕಾರ್ಯಕ್ರಮವನ್ನು ಇಲಾಖೆಯ ಪ್ರಕಾರ ಮಾಡಲಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ:– ಹಾಗಾದರೆ ನಿಗಮದವರು ಇವತ್ತಿನವರೆಗೂ ಏನು ಕೆಲಸವನ್ನೇ ತೆಗೆದುಕೊಂಡಿಲ್ಲವೇ? ಇತರೆ ಅಭಿವೃದ್ಧಿಗಾಗಿ ನೀಡಲಾಗಿರುವ ಅನುದಾನವೆಷ್ಟು ಎಂದು ಕೇಳಲಾಗಿದೆ.

ಅಧ್ಯಕ್ಷರು:– ಉತ್ತರವನ್ನು ತರಿಸಿ ಆನಂತರ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ:– Detail ಉತ್ತರ ತರಿಸಿಕೊಡಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು held over ಮಾಡಿ.

ಅಧ್ಯಕ್ಷರು:– ಆಯಿತು held over ಮಾಡೋಣ. ಉತ್ತರವನ್ನು ನಾಳೆ ತರಿಸಿಕೊಡಿ. ಮಾನ್ಯ ಆರ್. ಅಶೋಕ್‌ರವರು ಪ್ರಶ್ನೆಯನ್ನು ಕೇಳುವುದು. ಅವರು ಹಾಜರಿಲ್ಲ ಅವರ ಪರವಾಗಿ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಕೇಳುವುದು.